**ಪಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 14.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಎಸ್.ಎಂ, ವಕೀಲರಿಂದಃ**

ನಾನು ಕಂದಾಯವನ್ನು ನಿವೇಶನಕ್ಕೆ ಕಟ್ಟಿರುತ್ತೇನೆ. ನಿಪಿ-3 ರಲ್ಲಿ ಕಂದಾಯವನ್ನು ಮನೆಗೆ ಕಟ್ಟಿರುತ್ತಾರೆಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-4 ರಂತೆ ಹಿಂಬರಹ ನೀಡಿದ ನಂತರ ಮೇಲಾಧಿಕಾರಿಗಳಿಗೆ ಅರ್ಜಿ ನೀಡಿಲ್ಲ. ನಿಪಿ-2 ರಲ್ಲಿ ಚೆಕ್ ಬಂದಿಯನ್ನು ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ಸಹಿ ಪ್ರತಿವಾದಿಗಳ ತಂದೆಯ ಸಹಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಕ್ರಯಪತ್ರದಲ್ಲಿ ಚಿಕ್ಕನಾಯಕರವರ ಸಹಿಯಿದ್ದು, ನಿಪಿ-1 ರಲ್ಲಿ ಚಿಕ್ಕನಾಯಕರವರ ಸಹಿಯಿರುವುದಿಲ್ಲ ಎಂದರೆ ಸರಿಯಲ್ಲ. ಚಿಕ್ಕನಾಯಕರವರ ಹೆಂಡತಿ ಚಿಕ್ಕಮ್ಮರವರ ಹೆಸರಿಗೆ ಪಂಚಾಯಿತಿಯವರು ಇ-ಸ್ವತ್ತನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪಂಚಾಯಿತಿಗೆ ಖಾತೆ ಮಾಡಿಕೊಡಲು ನೀಡಿದ ದಾಖಲೆ ಸೃಷ್ಟಿಸಿದ ದಾಖಲೆಯಾಗಿರುವುದರಿಂದ ನನ್ನ ಹೆಸರಿಗೆ ಹಿಂಬರಹ ನೀಡಿ, ಚಿಕ್ಕಮ್ಮರವರ ಹೆಸರಿಗೆ ಖಾತೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಋಣಭಾರ ರಾಹಿತ್ಯ ಪ್ರಮಾಣಪತ್ರದಲ್ಲಿ ನಿಪಿ-1 ರ ಬಗ್ಗೆ ನಮೂದಾಗಿಲ್ಲ ಎಂದರೆ ಆಸ್ತಿ ನಮ್ಮದೇ ಆಗಿರುತ್ತದೆ. ನಿಪಿ-1 ಕ್ಕೆ ಪ್ರತಿವಾದಿ ಮತ್ತು ಅವರ ಅಣ್ಣ ಗೋವಿಂದನಾಯಕ ಯಾವತ್ತೂ ಕೂಡ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಯಾವತ್ತೂ ಕೂಡ ಚಿಕ್ಕನಾಯಕರವರಿಂದ ಆಸ್ತಿಯನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ನಿಪಿ-1 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**